ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/67/2015-16. ದಿನಾಂಕ:20-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕೆ.ಎಸ್.ಕವಿತ ಗಂಡ ಕೆ.ಎಸ್.ವಿರುಪಾಕ್ಷಿ 03 ನೇ ವಾರ್ಡ ಚಿರಿಬಿ ರಸ್ತೇ ಕೊಟ್ಟೂರು ಪಟ್ಟಣ<br>2)ಕಾಳಮ್ಮ ಗಂಡ ಲೇಟ್ ಹೋಳಾಚಿ ಕೊಟ್ರಪ್ಪ ಹುಣಸಿಕಟ್ಟೆ ಗ್ರಾಮ ಕೂಡ್ಲಿಗಿ ತಾಲೂಕು | ನಾಗಪ್ಪ ತಂದೆ ಲೇಟ್ ಮಹಾಲಿಂಗಪ್ಪ ಹುಣಸಿಕಟ್ಟೆ ಗ್ರಾಮ ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 160ಇ. ವಿಸ್ತೀರ್ಣ 1-67 ಎಕ್ರೆ ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 160ಇ. ವಿಸ್ತೀರ್ಣ 1-67 ಎಕ್ರೆ ಜಮೀನನ್ನು ಸದರಿ ತಾಲೂಕು ಹುಣಸಿಕಟ್ಟೆ ಗ್ರಾಮದ ಕಾಳಮ್ಮ ಗಂಡ ಲೇಟ್ ಹೋಳಾಚಿ ಕೊಟ್ರಪ್ಪ ಇವರಿಂದ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಕೆ.ಎಸ್.ಕವಿತ ಗಂಡ ಕೆ.ಎಸ್.ವಿರುಪಾಕ್ಷಿ ಇವರು ದಿನಾಂಕ 08-07-2015. ರ ಡಾಕ್ಯುಮೆಂಟ್ ನಂಬರ್: 1123/2015-16. ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಟ್ಟಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಜೋಳದಕೂಡ್ಲಿಗಿ ಇವರು ನಮೂನೆ-21 ನೋಟಿಸನ್ನು ದಿನಾಂಕ 29-07-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಹುಣಸಿಕಟ್ಟೆ ಗ್ರಾಮದ ನಾಗಪ್ಪ ತಂದೆ ಲೇಟ್ ಮಹಾಲಿಂಗಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 08/2015-16. ದಿನಾಂಕ 23-08-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 03-11-2015. ರಿಂದ 20-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಜೋಳದಕೂಡ್ಲಿಗಿ ಗ್ರಾಮದ ಸನಂ 160ಇ. ವಿಸ್ತೀರ್ಣ 1-67 ಎಕ್ರೆ ಜಮೀನನ್ನು ಸದರಿ ತಾಲೂಕು ಹುಣಸಿಕಟ್ಟೆ ಗ್ರಾಮದ ಕಾಳಮ್ಮ ಗಂಡ ಲೇಟ್ ಹೋಳಾಚಿ ಕೊಟ್ರಪ್ಪ ಇವರಿಂದ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಕೆ.ಎಸ್.ಕವಿತ ಗಂಡ ಕೆ.ಎಸ್.ವಿರುಪಾಕ್ಷಿ ಇವರು ದಿನಾಂಕ 08-07-2015 ರ ಡಾಕ್ಯುಮೆಂಟ್ ನಂಬರ್: 1123/2015-16. ರ ಪ್ರಕಾರ ರೂ: 1.01.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮು.ತಿ.ನೋ-2

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನಿಗೆ ಪ್ರತಿವಾದಿಗಳು ವಾರಸುದಾರರಾಗಿರುತ್ತಾರೆ. ಪ್ರತಿವಾದಿಗಳಿಗೆ ಹಕ್ಕು ಇರುವ ಬಗ್ಗೆ ಕೂಡ್ಲಿಗಿಯ ಸಿವಿಲ್ ನ್ಯಾಯಾಲಯ ಓ.ಎಸ್.ನಂಬರ್: 77/2015 ರಲ್ಲಿ ಧಾವೆ ಹೂಡಲಾಗಿದೇಯೇಂದು ತಿಳಿಸಿರುತ್ತಾರೆ. ಹಾಗೂ ಸದರಿ ಪ್ರಕರಣವು ವಿಚಾರಣೆಗೆ ಬಾಕಿ ಇರುವುದರಿಂದ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳೀಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ನೊಂದಾಯಿತ ಕ್ರಯ ಪತ್ರವನ್ನು ರದ್ದು ಪಡಿಸುವ ಅಧಿಕಾರ ಕಂದಾಯ ನ್ಯಾಯಾಲಯದಲ್ಲಿ ಇಲ್ಲದಿರುವುದರಿಂದ ನೊಂದಾಯಿತ ಕ್ರಯ ಪತ್ರದನ್ವಯ ಕರ್ನಾಟಕ ಭೂಕಂದಾಯ ಕಾಯ್ದೇ 1964 ರ ಕಲಂ 128 ರ ಅಡಿಯಲ್ಲಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 160ಇ. ವಿಸ್ತೀರ್ಣ 1-67 ಎಕ್ರೆ ಜಮೀನನ್ನು ದಿನಾಂಕ: 08-07-2015 ರ ಡಾಕ್ಯುಮೆಂಟ್ ನಂಬರ್: 1123/2015-16. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಕೆ.ಎಸ್.ಕವಿತ ಗಂಡ ಕೆ.ಎಸ್.ವಿರುಪಾಕ್ಷಿ ಕೊಟ್ಟೂರು ಪಟ್ಟಣ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಬಾಧಿತರಾದವರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿರುವ ಪ್ರಕರಣದಲ್ಲಿ ತಮ್ಮ ಹಕ್ಕನ್ನು ಸಾಬೀತು ಪಡಿಸುವಂತೆ ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 20-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

(ಉಪತಹಶೀಲ್ದಾರರು)
ನಾಡಕಚೇರಿ, ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೆ.ಎಸ್.ಕವಿತ ಗಂಡ ಕೆ.ಎಸ್.ವಿರುಪಾಕ್ಷಿ, 03 ನೇ ವಾರ್ಡ ಚೆಂಬಿ ರಸ್ತೇ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಕಾಳಮ್ಮ ಗಂಡ ಲೇಟ್ ಹೋಳಾಚಿ ಕೊಟ್ರಪ್ಪ ಹುಣಸಿಕಟ್ಟೆ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಡಿ.ಲಿಂಗರಾಜು ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ನಾಗಪ್ಪ ತಂದೆ ಲೇಟ್ ಮಹಾಲಿಂಗಪ್ಪ ಹುಣಸಿಕಟ್ಟೆ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಬಿ.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.